**<u>ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುದ್ದೇಬಿಹಾಳ</u>**

ಖಾಸಗಿ ಪಿರ್ಯಾದಿ ನಂ- 7/2021

ಚಾಸಾಃ 1

| | | |
|---|---|---|
| ಹೆಸರು | : | ಮಾಳಪ್ಪ ತಂದೆ ಹಣಮಪ್ಪ @ ಹಣಮಂತರಾಯ ಕಂಬಳಿ |
| ವಯಸ್ಸು | : | 71 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ನಾಗಬೇನಾಳ. |

ದಿನಾಂಕಃ 12.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## <u>ಸಾಕ್ಷಿಯ ಪ್ರಮಾಣಿಕೃತ ಹೇಳಿಕೆ</u>

ನಾನು ಈ ದೂರನ್ನು ಹಣಮಂತ ತಂದೆ ಸಂಗಪ್ಪ ಕಂಬಳಿ ರವರ ವಿರುದ್ಧ ಸಲ್ಲಿಸಿರುತ್ತೇನೆ. ಅವರು ನನ್ನ ಅಣ್ಣನ ಮಗ. ಅವರು ಪೋಲಿಸ್ ಪೇದೆ ಆಗಿದ್ದಾರೆ. ಆರೋಪಿತರು ನನ್ನ ಮತ್ತು ಅವರ ಜಮೀನನ್ನು ಕೂಡಿಯೇ ಬಿತ್ತುವದು ಬೆಳೆಯುವುದು ಮಾಡುತ್ತಾರೆ. ಅದಕ್ಕೆ ನಾನು ಆರೋಪಿಗೆ ನನ್ನ ಪಾಲಿನ ಜಮೀನನ್ನು ಕೊಡು ಎಂದು ಕೇಳಿದ್ದಕ್ಕೆ, ಆರೋಪಿ ಪಾಲು ಕೊಡುವದಿಲ್ಲ. ನಿನಗೆ ಒಬ್ಬಳೇ ಮಗಳಿದ್ದು, ಆಕೆಯ ಲಗ್ನವನ್ನು ಮಾಡುತ್ತೇವೆ ಎಂದು ಹೇಳಿರುತ್ತಾರೆ. ಆರೋಪಿ ಮತ್ತು ನಮ್ಮ ನಡುವೆ ಮಾತು ಕತೆ ಇರುವದಿಲ್ಲ.

ದಿ. 30.11.2021 ರಂದು ನಾನು ಮತ್ತು ನನ್ನ ಹೆಂಡತಿ ವೈಯಕ್ತಿಕ ಕೆಲಸಕ್ಕೋಸ್ಕರ

ನಾಲತವಾಡ ಗ್ರಾಮಕ್ಕೆ ಹೋಗಿದ್ದೆವು. ನಮ್ಮ ವೈಯಕ್ತಿಕ ಕೆಲಸ ಮುಗಿಸಿಕೊಂಡು ಊರಿಗೆ ಮರಳಿ ಹೋಗಲು ನಾಲತವಾಡ ಗ್ರಾಮದ ವೀರೇಶ್ವರ ಸರ್ಕಲ್ ಹತ್ತಿರ ಬಸ್ಸಿಗಾಗಿ ಕಾಯುತ್ತಾ ನಿಂತಾಗ, ಆರೋಪಿ ನಾಗಬೇನಾಳ ಗ್ರಾಮದ ಕಡೆಯಿಂದ ದ್ವಿಚಕ್ರ ವಾಹನದ ಮೇಲೆ ಬಂದು, ಏ ಮುದಿ ಸೂಳೆ ಮಗನೆ ಎಂದು ಬೈದು, ಗಾಡಿಯನ್ನು ಅಡ್ಡ ನಿಲ್ಲಿಸಿ ಗಟ್ಟಿಯಾಗಿ ಹಿಡಿದು ನೆಲಕ್ಕೆ ಕೆಡವಿರುತ್ತಾನೆ. ಬಲಗೈ ಮುಷ್ಟಿ ಮಾಡಿ ಎಡಗಡೆ ಸೊಂಟಕ್ಕೆ ಗುದ್ದಿದನು. ನನ್ನ ಹೆಂಡತಿ ಬಿಡಿಸಿಕೊಳ್ಳಲು ಬಂದಾಗ ಆಕೆಗೆ ಅವಾಚ್ಯ ಶಬದಗಳಿಂದ ಬೈದನು. ಆರೋಪಿ ಕಲ್ಲನ್ನು ಎರಡು ಕೈಗಳಲ್ಲಿ ಎತ್ತಿ ನಿನ್ನನ್ನು ಖಲಾಸ್ ಮಾಡುತ್ತೇನೆ ಎಂದು ಕಲ್ಲನ್ನು ಎಸೆಯಲು ಬಂದನು. ಆಗ ನನ್ನ ಹೆಂಡತಿ, ತಿಪ್ಪನ್ನ ದಂಡೀನ, ಸಂಗಪ್ಪ ಸುಲ್ತಾನಪೂರ ರವರು ಊರಿಗೆ ಹೋಗಲು ಬಸ್ಸಿಗಾಗಿ ಅಲ್ಲಿಯೇ ಕಾಯುತ್ತಾ ನಿಂತಿದ್ದರು. ಅವರು ಆರೋಪಿಗೆ ಬುದ್ದಿ ಹೇಳಿ ಜಗಳವನ್ನು ಬಿಡಿಸಿದರು. ಆಗ ಸಮಯ ಸಂಜೆ **4** ಗಂಟೆಯಾಗಿತ್ತು. ನಂತರ ನಾನು ಬಸ್ ಹತ್ತಿ ನನ್ನ ಗ್ರಾಮಕ್ಕೆ ಹೋಗಿರುತ್ತೇನೆ. ಆರೋಪಿ ಹಲ್ಲೆ ಮಾಡಿದ್ದರಿಂದ ನನಗೆ ನೋವಾಗಿದ್ದು ನಾನು ಮುದ್ದೇಬಿಹಾಳದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯಲ್ಲಿ ವೈದ್ಯರು ಇಂಜೆಕ್ಷನ್ ಕೊಟ್ಟಿರುತ್ತಾರೆ ಮತ್ತು ಎಕ್ಸರೆ ಮಾಡಿರುತ್ತಾರೆ. ವೈದ್ಯರಿಗೆ ನನ್ನನ್ನು ಪರೀಕ್ಷಿಸಿದ ವೈದ್ಯಕೀಯ ದಾಖಲೆಗಳನ್ನು ನೀಡುವಂತೆ ಕೇಳಿದ್ದರಿಂದ ನಿನ್ನ ಪ್ರಕರಣವು ಎಂ.ಎಲ್.ಸಿ ಕೇಸ್ ಆಗಿರುವದರಿಂದ ಕೊಡಲು ಬರುವದಿಲ್ಲ ಎಂದು ತಿಳಿಸಿರುತ್ತಾರೆ. ವೈದ್ಯರು ಪೋಲಿಸರಿಗೆ ಫೋನ್ ಮಾಡಿ ಆಸ್ಪತ್ರೆಗೆ ಕರೆಸಿರುತ್ತಾರೆ. ಪೋಲಿಸರು ಆಸ್ಪತ್ರೆಗೆ ಬಂದಾಗ ನಾನು ಅವರಿಗೆ ಮಾಹಿತಿ ತಿಳಿಸಿರುತ್ತೇನೆ. ಅವರು ನನ್ನ ಮಾಹಿತಿಯನ್ನು ಪಡೆದರೂ ಸಹ ಆರೋಪಿ ಪೋಲಿಸ್ ಆಗಿರುವದರಿಂದ ಪ್ರಕರಣವನ್ನು ದಾಖಲಿಸಿಕೊಂಡಿರುವದಿಲ್ಲ. ನಂತರ ವೈದ್ಯರು ನನ್ನನ್ನು ವಿಜಯಪೂರದ

ಜಿಲ್ಲಾಸ್ಪತ್ರೆಗೆ ಕಳುಹಿಸಿರುತ್ತಾರೆ.

ನಾನು ವಿಜಯಪೂರ ಸರ್ಕಾರಿ ಆಸ್ಪತ್ರೆಯಲ್ಲಿ ಮೂರು ದಿನಗಳವರೆಗೆ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯಲ್ಲಿ ಸಿಟಿ ಸ್ಕ್ಯಾನ್ ಮಾಡಿ ಇಂಜೆಕ್ಷನ್ ಹಾಗೂ ಮಾತ್ರೆಗಳನ್ನು ಕೊಟ್ಟಿರುತ್ತಾರೆ. ಸದರಿ ದಾಖಲೆಗಳನ್ನು ಕೇಳಲಾಗಿ ಅವರು ನಿನ್ನ ಪ್ರಕರಣವು ಎಂ.ಎಲ್.ಸಿ ಪ್ರಕರಣವಾಗಿರವದರಿಂದ ಅವುಗಳನ್ನು ಪೋಲಿಸರಿಗೆ ಕಳುಹಿಸಿಕೊಡುತ್ತೇವೆ ಎಂದು ಹೇಳಿರುತ್ತಾರೆ. ಸದರಿ ದಾಖಲೆಗಳ ಝುರಾಕ್ಸ್ ಪ್ರತಿಗಳನ್ನು ನನಗೆ ಕೊಟ್ಟಿರುತ್ತಾರೆ.

ನಂತರ ನಾನು ಎಸ್.ಪಿ. ವಿಜಯಪೂರ ಇವರಿಗೆ ಮತ್ತು ಪಿ.ಎಸ್.ಐ. ಮುದ್ದೇಬಿಹಾಳರವರಿಗೆ ಘಟನೆಯ ಬಗ್ಗೆ ಅಂಚೇ ಮೂಲಕ ದೂರು ಸಲ್ಲಿಸಿರುತ್ತೇನೆ. ನಂತರ ಮುದ್ದೇಬಿಹಾಳದಿಂದ ಪೋಲಿಸರು ಬಂದು ಜಗಳ ಮಾಡಿದ ಜಾಗಾ ತೋರಿಸು ಎಂದು ಹೇಳಿರುತ್ತಾರೆ. ನಾನು ಘಟನೆಯ ಸ್ಥಳವನ್ನು ತೋರಿಸಿರುತ್ತೇನೆ. ಅಲ್ಲಿ ಪೋಲಿಸರು ಪೋಟೋ ತೆಗೆದಿರುತ್ತಾರೆ. ನಂತರ ನನ್ನನ್ನು ಮನೆಗೆ ಕಳುಹಿಸಿರುತ್ತಾರೆ.

ದಿ. 09.11.2021 ರಂದು ಠಾಣಾಧಿಕಾರಿಗಳು ಮುದ್ದೇಬಿಹಾಳರವರು ನೀಡಿದ ಸ್ವೀಕೃತಿ, ಪೋಲಿಸ್ ಹಿಂಬರಹ, ಎರಡು ಅಂಚೇ ಸ್ವೀಕೃತಿಗಳು (ಒಟ್ಟಾಗಿ), ಮುದ್ದೇಬಿಹಾಳ ಪೋಲಿಸ್‌ರವರಿಗೆ ಕಳುಹಿಸಿದ ದೂರಿನ ಕಛೇರಿ ಪ್ರತಿ ಹಾಜರುಪಡಿಸಿದ್ದು ನಿ.ಸಿ.-1 ರಿಂದ 4 ಎಂದು ಗುರುತಿಸಲಾಯಿತು.

ನಾನು ವೈದ್ಯರಿಂದ ಪಡೆದ ಝುರಾಕ್ಸ್ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕಾಗಿ ಪ್ರಾರ್ಥನೆ.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ